


ಮ್ಯೂಸಿಯಂಗೆ ಭೇಟಿ ಕೊಡಬೇಕು. ಮಧ್ಯ ಏಷ್ಯಾದಲ್ಲೇ ಅತ್ಯಂತ ದೊಡ್ಡ ಮ್ಯೂಸಿಯಂ ಅಲ್ಮಾಟಿಯಲ್ಲಿದೆ, ಅದೇ ಸೆಂಟ್ರಲ್ ಮ್ಯೂಸಿಯಂ. ಇತಿಹಾಸದಿಂದ ಪ್ರಸ್ತುತ ಜಗತ್ತಿನ ವಸ್ತುಗಳು ಮ್ಯೂಸಿಯಂನಲ್ಲಿವೆ. ದೊಡ್ಡ ಆನೆಯ ಅಸ್ಥಿಪಂಜರದಿಂದ ಹಿಡಿದು ಕುದುರೆ ಸವಾರಿಯ ವಸ್ತುಗಳು, ಐತಿಹಾಸಿಕ ಕಲಾಕೃತಿಗಳು, ಮಹಿಳೆಯರ ಆಲಂಕಾರಿಕ ವಸ್ತುಗಳು, ಪೇಂಟಿಂಗುಗಳು, ಎರಡನೆಯ ಮಹಾಯುದ್ಧದ ತೋಪುಗಳು ಎಲ್ಲವೂ ಇಲ್ಲಿನ ಇತಿಹಾಸ, ಜೀವಸಂಕುಲ, ಜನಜೀವನವನ್ನು ಸಾರುತ್ತವೆ.

ಮ್ಯೂಸಿಯಂ ಪ್ರವೇಶ ದರ ಹೆಚ್ಚಿಲ್ಲ, ಆದರೆ ಇಲ್ಲಿನ ಚಿನ್ನದ ಕಲಾಕೃತಿಗಳು, ಮಾನವಶಾಸ್ತ್ರ ವಿಭಾಗ ಮತ್ತು ಎಚ್.ಜೆ. ಕ್ಲುಡೊವ್‌ನ ಪೇಂಟಿಂಗ್ ನೋಡಲು ದೊಡ್ಡ ಮೊತ್ತದ ಪ್ರವೇಶ ದರ ಕೊಡಬೇಕು.

ರಷ್ಯಾದವರಂತೆ ಇಲ್ಲಿನವರಿಗೂ ಮ್ಯೂಸಿಯಮ್ಮಿನ ಹುಚ್ಚು. 1830ರಲ್ಲಿ 'ಒರೆನ್‌ಬರ್ಗ್ ರೀಜನಲ್ ಮ್ಯೂಸಿಯಂ' ಎನ್ನುವ ಹೆಸರಿನಲ್ಲಿ ಸಂಗ್ರಹಾಲಯವೊಂದು ಸಾರ್ವಜನಿಕರಿಗೆ ಮೊದಲ ಬಾರಿಗೆ ತೆರೆದುಕೊಂಡಿತು. ವರ್ಷಗಳು ಉರುಳಿದಂತೆ ಮ್ಯೂಸಿಯಂ ಹೆಸರು, ಸ್ಥಳ ಬದಲಾಗುತ್ತಾ ಹೋಯಿತು. 1929ರಲ್ಲಿ ಅಲ್ಮಾಟಿಗೆ ಸ್ಥಳಾಂತರಗೊಂಡ ಮ್ಯೂಸಿಯಂ 'ಅಸೆನ್ಶನ್ ಕೆಥೆಡ್ರಲ್'ನಲ್ಲಿ ಜಾಗ ಪಡೆದುಕೊಂಡಿತು. ಈಗಿರುವ ಆಧುನಿಕ ಬೃಹದಾಕಾರದ 17 ಸಾವಿರ ಮೀಟರ್ ಸುತ್ತಳತೆ ಇರುವ ಮ್ಯೂಸಿಯಂ ಕಟ್ಟಡವನ್ನು 1985ರಲ್ಲಿ ಕಟ್ಟಿಸಲಾಯಿತು. ಮ್ಯೂಸಿಯಂನಲ್ಲಿ 7 ಪ್ರದರ್ಶನ ಹಾಲ್‌ಗಳಲ್ಲಿ 3 ಲಕ್ಷಕ್ಕೂ ಅಧಿಕ ವಸ್ತುಗಳಿವೆ. ಸುಸಜ್ಜಿತವಾಗಿದ್ದು ಮೂರು ಅಂತಸ್ತಿನಲ್ಲಿದೆ, ಸುತ್ತ ಹಣ್ಣಿನ ತೋಟ, ಹೂ ಗಿಡಗಳು ಮತ್ತು ಲಾನ್ ಇದ್ದು ಬಹಳ ಸುಂದರ ಹಾಗೂ ಪ್ರಶಾಂತವಾಗಿದೆ.

ಆಧುನಿಕ ಕಟ್ಟಡದ ಬೃಹದಾಕಾರದ ಹೆಬ್ಬಾಗಿಲನ್ನು ದಾಟಿ ಒಳಗೆ ಅಡಿಯಿಟ್ಟರೆ ದೊಡ್ಡ ಹಾಲ್ ಇದ್ದು, ಅದರಲ್ಲಿ ಕಜಕಿಸ್ತಾನದ ಸಾಂಪ್ರದಾಯಿಕ ಉಡುಗೆಯನ್ನು ತೊಟ್ಟ ನಾಲ್ಕು ಆಳೆತ್ತರದ ಮೂರ್ತಿಗಳು ಸ್ವಾಗತಿಸುತ್ತವೆ. ಮ್ಯೂಸಿಯಂನ ಮೊದಲ ಹಾಲ್‌ನಲ್ಲಿ ಪ್ರಾಚೀನ ಜೀವಶಾಸ್ತ್ರ, ಪುರಾತತ್ವಶಾಸ್ತ್ರಕ್ಕೆ ಸಂಬಂಧಪಟ್ಟ ವಸ್ತುಗಳಿವೆ. ಮನುಷ್ಯನ ಅಸ್ತಿತ್ವಕ್ಕಿಂತಲೂ ಪುರಾತನವಾದ ಪ್ರಾಣಿಗಳ ಪಳೆಯುಳಿಕೆ, ಕಲ್ಲಿಗಂಟಿಕೊಂಡಿದ್ದ ಗಿಡ ಮರ, ಎಲೆಗಳೇ ಇಲ್ಲಿನ ಆಕರ್ಷಣೆ. ಪುರಾತನ ಸಮಾರಂಭ ಮತ್ತು ಶವಸಂಸ್ಕಾರಕ್ಕೆ ಸಂಬಂಧಿಸಿದ ವಸ್ತುಗಳು ಸಹ ಗಮನಸೆಳೆಯುತ್ತವೆ.

**ಅಲ್ಮಾಟಿ, ತನ್ನೊಳಗೆ ಇತಿಹಾಸದ ಕುರುಹುಗಳನ್ನು ಇಂದಿಗೂ ಜತನವಾಗಿ ಕಾಪಿಟ್ಟುಕೊಂಡು ಬಂದಿರುವ ಕಜಕಿಸ್ತಾನದ ನಗರ. ಇಲ್ಲಿನ ಪ್ರಕೃತಿ ಸೌಂದರ್ಯ ನೋಡುಗರ ಮನತಣಿಸಿದರೆ, ಸ್ಮಾರಕಗಳು, ಮ್ಯೂಸಿಯಂಗಳು ಇತಿಹಾಸವನ್ನು ಕಣ್ಮುಂದೆ ತರುತ್ತವೆ.**

ಎರಡನೆಯ ಹಾಲ್‌ನಲ್ಲಿ ಕಜಕ್ ಸಂಸ್ಕೃತಿಯನ್ನು ಬಿಂಬಿಸುವ ವಸ್ತುಗಳು, ಆಭರಣಗಳು, ಕಾರ್ಪೆಟ್, ಬಟ್ಟೆ ಬರೆಗಳು, ವಾದ್ಯ ಯಂತ್ರಗಳು, ಗೃಹೋಪಯೋಗಿ ವಸ್ತುಗಳು, ಸಾಂಪ್ರದಾಯಿಕ ಆಲಂಕಾರಿಕ ವಸ್ತುಗಳು, ಆಯುಧಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಕಜಕ್ ಜನರು ಮೊದಲು ಅಲೆಮಾರಿಗಳಾಗಿದ್ದರು. ಆ ಸಮಯದಲ್ಲಿ ಗೋಲಾಕಾರದಲ್ಲಿ ತಾತ್ಕಾಲಿಕ ಮನೆಗಳನ್ನು ಕಟ್ಟುತ್ತಿದ್ದರು. ಅದನ್ನೂ ಪ್ರದರ್ಶನಕ್ಕಿಟ್ಟಿದ್ದಾರೆ. ಅವರ ಸಂಸ್ಕೃತಿ, ಜನಜೀವನವನ್ನು ಬಿಂಬಿಸುವ ಆಳೆತ್ತರದ ಮೂರ್ತಿಗಳು, ಸ್ಟಫ್ಡ್ ಪ್ರಾಣಿ ಪಕ್ಷಿಗಳು ಇಲ್ಲಿನ ಮುಖ್ಯ ಆಕರ್ಷಣೆ.

ಮೂರನೆಯ ಹಾಲ್‌ನಲ್ಲಿ ಕಜಕಿಸ್ತಾನ ಮತ್ತು ಸುತ್ತಮುತ್ತಲಿನ ದೇಶಗಳ ಆದಿವಾಸಿ ಮತ್ತು ಅಲೆಮಾರಿ ಜನಾಂಗದವರ ಉಡುಗೆ, ತೊಡುಗೆ, ದಿನಬಳಕೆಯ ವಸ್ತುಗಳು ಮತ್ತು ಫೋಟೊಗಳ ಪ್ರದರ್ಶನವಿದೆ. ರಷ್ಯಾ, ಉಕ್ರೇನ್, ಜರ್ಮನ್, ಟರ್ಕಿಶ್, ಕುರ್ದ್, ಕೊರಿಯನ್ ಅಲೆಮಾರಿ ಜನಾಂಗದವರ ಆಚಾರ ವಿಚಾರಗಳನ್ನೂ ಈ ಮೂಲಕ ತಿಳಿದುಕೊಳ್ಳಬಹುದು. ಎರಡನೆಯ ಮಹಾಯುದ್ಧದಲ್ಲಿ ಕಜಕಿಸ್ತಾನ ಹೇಗೆ ಸಕ್ರಿಯವಾಗಿತ್ತು ಎಂದು ತೋರಿಸುವ ಚಿತ್ರಗಳು ಪ್ರದರ್ಶನಕ್ಕಿವೆ.

ನಾಲ್ಕನೆಯ ಹಾಲ್ ಆಧುನಿಕ, ಸ್ವತಂತ್ರ ಕಜಕಿಸ್ತಾನಕ್ಕಾಗಿ, ಅಂದರೆ 1991ರ ನಂತರದ ದೇಶದ ಇತಿಹಾಸ, ವಿದೇಶಿ ಸಂಬಂಧಗಳನ್ನು ಸಾರುವ ಹಲವಾರು ವಸ್ತುಗಳು, ಫೋಟೊಗಳಿವೆ. ರಾಷ್ಟ್ರೀಯ ಲಾಂಛನ, ಧ್ವಜ, ಕರೆನ್ಸಿ ನೋಟುಗಳು, ಸ್ಟಾಂಪುಗಳ ಪ್ರದರ್ಶನವಲ್ಲದೆ ದೇಶ ಸಾಧಿಸಿದ ಆರ್ಥಿಕ, ಸಾಮಾಜಿಕ, ವಿದ್ಯಾಭ್ಯಾಸ, ಸಂಸ್ಕೃತಿ, ವಿಜ್ಞಾನ, ಕ್ರೀಡೆಯಲ್ಲಿನ ಪ್ರಗತಿಯನ್ನು ಸಾರುವ ಚಿತ್ರಗಳ ಪ್ರದರ್ಶನವಿದೆ. ರಾಜಕೀಯವಾಗಿ ಕಜಕಿಸ್ತಾನ ವಿದೇಶಗಳೊಡನೆ ಅತ್ಯುತ್ತಮ ಸಂಬಂಧವಿಟ್ಟುಕೊಂಡಿದೆ. ನಮ್ಮ ಭಾರತದ ಪ್ರಧಾನಿ ಮೋದಿಯೊಡನೆ ಅಲ್ಲಿನ ರಾಷ್ಟ್ರಾಧ್ಯಕ್ಷರಿರುವ ಫೋಟೊ ಗಮನಸೆಳೆಯುತ್ತದೆ.

ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಸಾಗುವ ಮಾರ್ಗದಲ್ಲಿ ಪ್ರದರ್ಶನಕ್ಕಿಟ್ಟ ವರ್ಣಚಿತ್ರಗಳೂ ಆಕರ್ಷಕ. ಇಷ್ಟಲ್ಲದೆ ಪ್ರೊಜೆಕ್ಟರ್ ಇಟ್ಟು ಕಜಕ್ ಇತಿಹಾಸ ಮತ್ತು ಸಂಸ್ಕೃತಿಯನ್ನೂ ತೋರಿಸುತ್ತಾರೆ.

ಐದನೆಯ ಹಾಲ್‌ನಲ್ಲಿ ಚಿನ್ನದ ಕಲಾಕೃತಿ, ಆರನೆಯ ಹಾಲ್‌ನಲ್ಲಿ ಮಾನವಶಾಸ್ತ್ರ, ಏಳನೆಯ ಹಾಲ್‌ನಲ್ಲಿ ಎಚ್.ಜೆ. ಕ್ಲುಡೊವ್‌ನ ಪೇಂಟಿಂಗುಗಳಿವೆ, ಕ್ಲುಡೊವ್ ರಷ್ಯಾದ ಪ್ರಖ್ಯಾತ ವರ್ಣಚಿತ್ರಕಾರ. ಇವುಗಳನ್ನು ನೋಡಲಾಗಲಿಲ್ಲ, ಇಲ್ಲಿಗೆ ಪ್ರತ್ಯೇಕ ಟಿಕೆಟ್ ತೆಗೆದುಕೊಳ್ಳಬೇಕು.

## ಮೆಮೊರಿಯಲ್ ಆಫ್ ಗ್ಲೋರಿ

'28 ಪನ್ ಫಿಲೋವ್ ಗಾರ್ಡ್ಸ್‌ಮೆನ್ ಪಾರ್ಕ್'ನಲ್ಲಿದೆ ಈ ವಾರ್ ಮೆಮೊರಿಯಲ್.